# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಹುಣಸೂರು.

## ಸಿ.ಸಿ. ಸಂಖ್ಯೆ: 161/23

**ಸಾಕ್ಷಿಯನ್ನು ದಿಃ 12.08.2024 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | |
|---|---|---|
| ಹೆಸರು | ಸಿದ್ದರಾಮು ಎಮ್ | ಸಿ.ಡಬ್ಲ್ಯೂಃ **1** ಪಿ.ಡಬ್ಲ್ಯೂಃ **1** |
| ತಂದೆಯ ಹೆಸರು | ಮೆಳ್ಳೆಗೌಡ | |
| ವಯಸ್ಸು | **62** ವರ್ಷ | |
| ಕೆಲಸ | ನಿವೃತ್ತ ಹೈಸ್ಕೂಲ್ ಮ್ಯುಖ್ಯಶಿಕ್ಷಕರು | |
| ವಾಸಸ್ಥಳ | ಹುಣಸೂರು | |

ಮ್ಯುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

1. ಚಾಸಾ-2,3 ರವರು ಪರಿಚಯ ಇದ್ದಾರೆ. ಚಾಸಾ-4,5 ರವರ ಪರಿಚಯ ಇಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ದಾಖಲೆ ಮಹಜರ್ ಆಗಿದ್ದು ಅದನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ)ಎಂದು ಗುರುತಿಸಲಾಯಿತು. ಪೊಲೀಸರಿಗೆ ನಾನು ಕಳ್ಳತನ ಸಂಬಂಧ ಹೇಳಿಕೆ ನೀಡಿರುತ್ತೇನೆ.

2. ಕಳ್ಳತನವಾದ ಸಮಯದಲ್ಲಿ ನಾನು ಕಲ್ಲುಣಿಕೆ ಸರಕಾರಿ ಹೈಸ್ಕೂಲ್ ಮ್ಯುಖ್ಯಶಿಕ್ಷಕರಾಗಿದ್ದು, ದಿಃ07.01.2023 ರಂದು ಚಾಸಾ-6 ರವರು ಬೆಳಿಗ್ಗೆ 7.00 ಗಂಟೆ ಸಮಯದಲ್ಲಿ ನನ್ನ ಮೊಬೈಲ್ ಗೆ ಕರೆ ಮಾಡಿ ನಮ್ಮ ಶಾಲೆಯ ಅಡುಗೆ ಮನೆಯ ಕೊಠಡಿಗೆ ಹಾಕಿದ್ದ ಬೀಗವನ್ನು ಯಾವುದೋ ಆಯುಧದಿಂದ ಮೀಟಿ ಬಾಗಿಲನ್ನು ಹೊಡೆದು, ಅಡುಗೆ ಮನೆಯಲ್ಲಿ ಇಟ್ಟಿದ್ದ ಅಕ್ಕಿ 30 kg, 30 kg ಬೇಳೆ, ಹಾಲಿನ ಪುಡಿ 16 ಪ್ಯಾಕೇಟ್, 7 ಲೀ.ಎಣ್ಣೆ , ಒಂದು ಗ್ಯಾಸ್ ಸಿಲಿಂಡರ್ ಅನ್ನು ಕಳ್ಳತನ ಮಾಡಿರುತ್ತಾರೆ. ಇವುಗಳ ಅಂದಾಜು ಬೆಲೆ ರೂ.6,000/- ಗಳಾಗಿರುತ್ತವೆ. ನಂತರ ನಾನು ಸುಮಾರು 11.30 ರ ಸಮಯದಲ್ಲಿ ಹುಣಸೂರು ಪಟ್ಟಣ ಠಾಣೆಗೆ ಹೋಗಿ ನಿಪಿ.1 ರಂತೆ ದೂರು ನೀಡಿರುತ್ತೇನೆ. ಅದೇ ದಿನದಂದು ಪೊಲೀಸರು ನಾನು ಸ್ಥಳ ತೋರಿಸಿದ ಮೇರೆಗೆ ಬೆಳಿಗ್ಗೆ 11.30 ರಿಂದ 12.30 ರವರೆಗೆ ಮಹಜರ್ ಮಾಡಿ ನನ್ನ

ಹಾಗೂ ಚಾಸಾ-2,3 ರವರ ಸಹಿಯನ್ನು ಅದೇ ಸ್ಥಳದಲ್ಲಿ ಪಡೆದಿರುತ್ತಾರೆ. ಪಂಚನಾಮೆಯಲ್ಲಿರುವ ವಿಚಾರಗಳನ್ನು ಪೊಲೀಸರು ನನಗೆ ಓದಿ ತಿಳಿಸಿರುತ್ತಾರೆ. ನಂತರ ಪೊಲೀಸರು 4-5 ದಿನಗಳ ಕಳೆದ ನಂತರ 4 ಜನರನ್ನು ಶಾಲೆಗೆ ಕರೆದುಕೊಂಡು ಬಂದರು. ಆರೋಪಿತರು ಸಿಕ್ಕಿದ್ದಾರೆ ಎಂದು ನನ್ನನ್ನು ಪೊಲೀಸ್ ಠಾಣೆಗೆ ಕರೆಯಿಸಿ ನಮ್ಮ ಶಾಲೆಯಲ್ಲಿ ಕಳ್ಳತನವಾದ ಒಂದು ಸಿಲಿಂಡರ್ ಅನ್ನು ನನಗೆ ನೀಡಿದ್ದರು. ಆರೋಪಿತರನ್ನು ನನಗೆ ಆ ದಿನ ಪೊಲೀಸರು ತೋರಿಸಿದ್ದರು. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯು ಆ ದಿನ ಇದ್ದನು.

<u>ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಎನ್.ಕೆ ವಕೀಲರಿಂದಃ</u>

3. ದೂರನ್ನು ನಮ್ಮ ಸ್ಟಾಫ್ ಗೆ ಹೇಳಿ ನಾನೇ ಬರೆಯಿಸಿರುತ್ತೇನೆ. ದೂರನ್ನು ನಾನೇ ಬರೆಯಲು ತೊಂದರೆ ಇರಲಿಲ್ಲ. ನನಗೆ ಬೇರೆ ಕರ್ತವ್ಯ ಇದ್ದರಿಂದ ನಮ್ಮ ಸ್ಟಾಫ್ ಗೆ ಹೇಳಿ ನಾನೇ ಬರೆಯಿಸಿರುತ್ತೇನೆ. ದೂರನ್ನು ಬರೆದವರನ್ನು ಕೂಡ ಪ್ರಸ್ತುತ ಪ್ರಕರಣದಲ್ಲಿ ಸಾಕ್ಷಿಯಾಗಿ ಮಾಡಿಸಿರುತ್ತೇವೆ.

4. ಅಂದು ಅಲ್ಲಿ ಬೀಗವನ್ನು ಹೊಡೆದುಹಾಕಿದರು ಎಂದು ಹೇಳಿದ್ದು, ಹೊಡೆದು ಹಾಕಿದ್ದ ಬೀಗ ಆಗಲಿ ಅಥವಾ ಹಿಂದಿನ ದಿನ ಬೀಗ ಹಾಕಿದ್ದರು ಎಂಬ ಬಗ್ಗೆ ದಾಖಲಾತಿಗಳನ್ನು ಪೊಲೀಸರಿಗೆ ಕೊಟ್ಟಿರುವುದಿಲ್ಲ. ಬೀಗವನ್ನು ಮಾಮುಲಿಯಾಗಿ ಹಾಕುತ್ತಿದ್ದ ಗ್ರೂಪ್ ಡಿ ನೌಕರರೇ ಹಾಕಿದ್ದರು. ಸದರಿ ಗ್ರೂಪ್ ಡಿ ನೌಕರರಿಂದ ದೂರು ಕೊಡಿಸಲು ತೊಂದರೆ ಇತ್ತಾ ಎಂದರೆ ಸಂಸ್ಥೆಯ ಮುಖ್ಯಸ್ಥರಾಗಿದ್ದ ನೀವು ಸಾಕು ಎಂದು ಪೊಲೀಸರು ಹೇಳಿದ್ದರು. ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಎರಡು ಬಾರಿ ಠಾಣೆಗೆ ಹೋಗಿದ್ದೆ. ನಾನು ಆ ರೀತಿ ಠಾಣೆಗೆ ಹೋದಾಗ ಪೊಲೀಸರು ನನ್ನಿಂದ 2-3 ಸಹಿಗಳನ್ನು ಪಡೆದುಕೊಂಡಿರಬಹುದು, ನೆನಪಿಲ್ಲ.

5. ಸ್ಥಳ ಮಹಜರ್ ಚೆಕ್ಕುಬಂದಿ ಹೇಳಬಲ್ಲೆ. ಆ ದಿನ ಯಾರು ಕಳ್ಳತನ ಮಾಡಿದ್ದರು ಎಂಬ ಸಂಪೂರ್ಣ ಮಾಹಿತಿ ನನಗೆ ಇಲ್ಲ ಎಂದರೆ ಸರಿ. ಮಹಜರ್ ಸಮಯದಲ್ಲಿ ಯಾವುದೇ ಸಾರ್ವಜನಿಕರು ಇರಲಿಲ್ಲ. ಈ ದಿನ ನ್ಯಾಯಾಲಯದ ಮುಂದಿರುವ

ಆರೋಪಿಯ ಹೆಸರು, ತಂದೆ ಹೆಸರು ಹಾಗೂ ವಿಳಾಸ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಇದೇ ಮೊದಲು ನೋಡುತ್ತಿದ್ದೇನೆ ಎಂದರೆ ಪೊಲೀಸರು ಶಾಲೆಗೆ ಕರೆದುಕೊಂಡು ಬಂದಾಗ ಒಮ್ಮೆ ನೋಡಿದ್ದೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಇದೇ ಮೊದಲು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಆ ದಿನ ಶಾಲೆಗೆ ಕರೆತಂದಿರಲಿಲ್ಲ, ಯಾವುದೇ ಮಹಜರ್ ಮಾಡಿಲ್ಲ ಆದ್ದರಿಂದಲೇ ನಾನು ಈ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಶಾಲೆಯಲ್ಲಿ ಯಾವುದೇ ಕಳ್ಳತನ ಮಾಡಿಲ್ಲ ಎಂದರೆ ಸರಿಯಲ್ಲ. ನಾವು ಆ ದಿನ ಶಾಲೆಯ ಅಡುಗೆ ಮನೆಗೆ ಬೀಗ ಹಾಕಿದ್ದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ, ಆ ಕಾರಣವೇ ಬೀಗ ಹಾಕಿದ್ದರ ಬಗ್ಗೆ ಅಥವ ಅದನ್ನು ಹೊಡೆದ ಬಗ್ಗೆ ಯಾವುದೇ ಫೋಟೋ ಇಲ್ಲ ಹಾಗೂ ಅದು ಯಾವ ಕಂಪನಿಯ ಬೀಗ ಎಂಬ ವಿವರಗಳು ಇಲ್ಲ ಎಂದರೆ ಸರಿಯಲ್ಲ. ನಮ್ಮ ಶಾಲೆಯ ಡಿ ಗ್ರೂಪ್ ನೌಕರರ ನಿರ್ಲಕ್ಷ್ಯತನದಿಂದ ಆ ದಿನ ಬೀಗ ಹಾಕದ ಕಾರಣ ನಮ್ಮ ಶಾಲೆಯ ಅಡುಗೆ ಮನೆ ವಸ್ತುಗಳನ್ನು ತೆಗೆದುಕೊಂಡು ಹೋಗಿದ್ದು, ಪೊಲೀಸರ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಳ್ಳತನ ಯಾರು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲದಿದ್ದರು ಸಹ ಹಾಗೂ ಆರೋಪಿಯು ಯಾವೂದೇ ತಪ್ಪು ಮಾಡದೇ ಇದ್ದರು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.